UASB LIBRARY
Newspaper Clippings
Pg .1 Thursday 30-12-2021 Jai Kisan



ರೈತರ ಆದಾಯ ದ್ವಿಗುಣಗೊಳಿಸುವ ರೂಪುರೇಷೆಗೆ ಸಿಎಂ ಚಾಲನೆ: ಮಂಜುನಾಥ ಪ್ರಸಾದ್

2025ಕ್ಕೆ 500 ಬಿಲಿಯನ್ ಡಾಲರ್ ಗುರಿ

ಬೆಂಗಳೂರು: ರಾಜ್ಯದ ಆರ್ಥಿಕತೆಯನ್ನು 2025 ರ ವೇಳೆಗೆ 500 ಬಿಲಿಯನ್ ಡಾಲರ್‌ಗೆಕೊಂಡೊಯ್ಯಲುಸಿಎಂಬಸವರಾಜಬೊಮ್ಮಾಯಿ ನೀಲನಕ್ಷೆ ಸಿದ್ಧಪಡಿಸಿದ್ದು, ರೈತರ ಆದಾಯ ದ್ವಿಗುಣಗೊಳಿಸುವುದಕ್ಕೂ ರೂಪುರೇಷೆ ತಯಾರಿಸಿದ್ದಾರೆ ಎಂದು ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಮಂಜುನಾಥ ಪ್ರಸಾದ್ ಹೇಳಿದರು.

ಆಡಳಿತ ಮತ್ತು ಅಭಿವೃದ್ಧಿಯಲ್ಲಿ ಮಾಧ್ಯಮಗಳ ಪಾತ್ರ ಕುರಿತು ಕರ್ನಾಟಕ ಮಾಧ್ಯಮ ಅಕಾಡೆಮಿ ಬುಧವಾರ ಹಮ್ಮಿಕೊಂಡಿದ್ದ ಸಂವಾದದಲ್ಲಿ ಮಾತನಾಡಿದ ಅವರು, ಕೃಷಿ, ಕೈಗಾರಿಕಾ ಕ್ಷೇತ್ರಕ್ಕಿಂತ ಸೇವಾ ವಲಯದಲ್ಲಿ ರಾಜ್ಯವು ಹೆಚ್ಚಿನ ಅಭಿವೃದ್ಧಿ ಹೊಂದುತ್ತಿದ್ದು, ಕೋವಿಡ್ ಸಂದರ್ಭದಲ್ಲೂ ಮಾಹಿತಿ ತಂತ್ರಜ್ಞಾನ ರಫ್ತಿನಲ್ಲಿ ಮುಂದಿದ್ದೆವು. ಆದರೆ, ಇದಕ್ಕೆ ಅಗತ್ಯ ಮಾನವ ಸಂಪನ್ಮೂಲ ಮತ್ತು ಸಂಪರ್ಕ ಒದಗಿಸಬೇಕಿದ್ದು, ಈ ಕಾರ್ಯವನ್ನು ಸರ್ಕಾರ ಮಾಡಲಿದೆ ಎಂದರು.

ಸರ್ಕಾರದ ಕಾರ್ಯ ಜನರಿಗೆ ತಲುಪಲು ಮಾಧ್ಯಮ ಅಗತ್ಯ

ಆಡಳಿತ ಮತ್ತು ಪತ್ರಿಕೋದ್ಯಮಗಳೆರಡೂ ಅವಿಭಾಜ್ಯ ಅಂಗಗಳು. ಆಡಳಿತ ಯಂತ್ರ ಸರಿಯಾಗಿ ನಡೆಯಬೇಕಿದ್ದರೆ ಎರಡೂ ಇರಬೇಕು. ಟೀಕೆ-ಟಿಪ್ಪಣಿಯನ್ನು ಸ್ಪರ್ಧಾತ್ಮಕವಾಗಿ ಸ್ವೀಕರಿಸಬೇಕು. ಇಬ್ಬರಲ್ಲೂ ಪ್ರತಿಷ್ಠೆ ಇರಬಾರದು. ಸರ್ಕಾರದ ಕಾರ್ಯಕ್ರಮಗಳನ್ನು ಜನರಿಗೆ ಪರಿಣಾಮಕಾರಿಯಾಗಿ ತಲುಪಿಸಲು ಮಾಧ್ಯಮ ಬೇಕು. ಟೆಂಡರ್ ಪೂರ್ವ ಪರಿಶೀಲನೆಗೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ



ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ. ಇದರಿಂದ ಗುಣಮಟ್ಟ ಕಾಪಾಡುವುದರೊಂದಿಗೆ ಸರ್ಕಾರಕ್ಕೆ ಆಗಬಹುದಾದ ಆರ್ಥಿಕ ನಷ್ಟವನ್ನೂ ತಪ್ಪಿಸಬಹುದು. ಪಾರದರ್ಶಕತೆ ಇರಲಿದೆ. ಇಂತಹ ಹಲವು ಅಂಶಗಳು ಜನರಿಗೆ ತಲುಪುವಂತಾಗಬೇಕು ಎಂದು ಪ್ರತಿಪಾದಿಸಿದರು. ಕನ್ನಡ ಪ್ರಭ ಪ್ರಧಾನ ಸಂಪಾದಕ ರವಿ ಹೆಗಡೆ, ಅಕಾಡೆಮಿ ಅಧ್ಯಕ್ಷ ಸದಾಶಿವ ಶಣೈ, ಸದಸ್ಯರಾದ ಕೆ.ಕೆ. ಮೂರ್ತಿ, ಶಿವಕುಮಾರ್ ಬೆಳ್ಳಿತಟ್ಟೆ, ಕೆ.ಎಂ. ಶಿವರಾಜ್, ಬದ್ರುದ್ದೀನ್ ಮಾಣಿ, ಲಕ್ಷ್ಮೀನಾರಾಯಣ, ಕೂಡ್ಲಿ ಗುರುರಾಜ್ ಇದ್ದರು.

ಪಾಲಿಕೆಯಲ್ಲಿದ್ದರೂ ತಾಳ್ಮೆ ಕಳೆದುಕೊಂಡಿಲ್ಲ

ಬಿಎಂಪಿ ಕಾಲದಿಂದ ಬಿಬಿಎಂಪಿವರೆಗೆ ಸುದೀರ್ಘ ಅವಧಿ ಕೆಲಸ ಮಾಡಿದವರು ವಿರಳ. ನಾನು ಮೂವರು ಸಿಎಂ ಹಾಗೂ ಐವರು ಮೇಯರ್ ಅಲ್ಲದೆ, ಮುಖ್ಯ ಆಡಳಿತಾಧಿಕಾರಿ ಜೊತೆಗೂ ಕೆಲಸ ಮಾಡಿದ್ದೇನೆ. 6 ತಿಂಗಳು ಬಿಬಿಎಂಪಿಯಲ್ಲಿ ಕೆಲಸ ಮಾಡಿದರೆ ನಗು ಕಳೆದುಕೊಳ್ಳುತ್ತಾರೆ, ಶುಗರ್, ಬಿಪಿ ಬರುತ್ತದೆ ಎನ್ನುತ್ತಾರೆ. ಆದರೆ, ನನಗೀಗ 57 ವರ್ಷ ಆಗಿದ್ದರೂ, ಯಾವ ಕಾಯಿಲೆಯೂ ಇಲ್ಲ. ಆಡಳಿತದಲ್ಲಿರುವ ಅಧಿಕಾರಿಗಳಿಗೆ ತಾಳ್ಮೆ ಇರಬೇಕು, ಪ್ರತಿಷ್ಠೆ ಇರಬಾರದು. ನಾನು ಐಎಎಸ್ ಬರೆದು ತರಬೇತಿಗೆಂದು ಪಶ್ಚಿಮ ಬಂಗಾಳಕ್ಕೆ ಹೋದೆ. 12 ವರ್ಷ ಅಲ್ಲಿಯೇ ಕೆಲಸ ಮಾಡಿದೆ. ಅಲ್ಲಿನ ಹಿರಿಯ ಅಧಿಕಾರಿಗಳು ನನಗೆ ಮಾಡಿದ ಮೊದಲ ಪಾಠವೆಂದರೆ, ಪ್ರತಿಷ್ಠೆ ಬಿಟ್ಟು ಜನರೊಂದಿಗೆ ಗೌರವದಿಂದ ಬೆರೆಯಬೇಕು. ಸೇವೆಯಲ್ಲಿದ್ದಾಗ ಬಹಳ ಬಾರಿ ವರ್ಗಾವಣೆ ಆದೆವು ಎಂಬುದು ಸಾಧನೆ ಅಲ್ಲ. ಜನರ ಸಾಕ್ಷರತೆ, ನೈರ್ಮಲ್ಯ, ಆರೋಗ್ಯ ಸುಧಾರಣೆಯಂತಹ ಅಂಶಗಳು ನಮ್ಮ ಆದ್ಯತೆ ಆಗಿರಬೇಕು ಎಂದು ಮಂಜುನಾಥ ಪ್ರಸಾದ್ ತಿಳಿಸಿದರು.

30-12-2021
Hd Pg 07

ನಾಡಿದ್ದು ರೈತರ ಖಾತೆಗೆ ₹2 ಸಾವಿರ

ಪ್ರಧಾನಮಂತ್ರಿ-ಕಿಸಾನ್ ಯೋಜನೆ 10ನೇ ಕಂತು ಜನವರಿ 1ಕ್ಕೆ ಬಿಡುಗಡೆ

ಹೊಸದಿಲ್ಲಿ: ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ (ಪಿಎಂ-ಕಿಸಾನ್) ಯೋಜನೆಯ 10ನೇ ಕಂತನ್ನು ಜನವರಿ 1ರಂದು ರೈತರ ಖಾತೆಗಳಿಗೆ ಜಮಾ ಮಾಡಲಾಗುತ್ತದೆ. ಏಕಕಾಲದಲ್ಲಿ ದೇಶದ 10 ಕೋಟಿಗೂ ಅಧಿಕ ರೈತರ ಬ್ಯಾಂಕ್ ಖಾತೆಗಳಿಗೆ ತಲಾ ಎರಡು ಸಾವಿರ ರೂ. ಜಮೆಯಾಗಲಿದೆ.

'ಪ್ರಧಾನಿ ನರೇಂದ್ರ ಮೋದಿ ಅವರು ಜ.1ರಂದು ಮಧ್ಯಾಹ್ನ 12 ಗಂಟೆಗೆ ವಿಡಿಯೊ ಕಾನ್ಫರೆನ್ಸ್ ಮೂಲಕ ರೈತರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಇದೇ ವೇಳೆ ಅವರು ಪಿಎಂ ಕಿಸಾನ್ ಯೋಜನೆಗೆ 10ನೇ ಕಂತಿನ ಮೊತ್ತವನ್ನು ಬಿಡುಗಡೆ ಮಾಡುವರು. ಅಲ್ಲದೆ 351 ಕೃಷಿ ಉತ್ಪನ್ನ ಸಂಘಟನೆ (ಎಫ್‌ಪಿಒ)ಗಳಿಗೆ 14 ಕೋಟಿ ರು. ಅನುದಾನವನ್ನೂ ಪ್ರಧಾನಿ ಬಿಡುಗಡೆ ಮಾಡಲಿದ್ದಾರೆ. ಇದರಿಂದ 1.24 ಲಕ್ಷ ರೈತರಿಗೆ ಅನುಕೂಲವಾಗಲಿದೆ. ಕಾರ್ಯಕ್ರಮದಲ್ಲಿ ಎಫ್‌ಪಿಒ ಸದಸ್ಯರ ಜತೆಗೆ ಸಂವಾದ ಸಹ ನಡೆಸಲಿದ್ದಾರೆ' ಎಂದು ಪ್ರಧಾನಮಂತ್ರಿ ಕಚೇರಿ ಮಾಹಿತಿ ನೀಡಿದೆ. ದೂರದರ್ಶನದಲ್ಲಿ ಕಾರ್ಯಕ್ರಮದ ನೇರ ಪ್ರಸಾರವಿದೆ.

ಕೇಂದ್ರ ಸರಕಾರವು 2018ರಲ್ಲಿ ಪಿಎಂ-ಕಿಸಾನ್ ಯೋಜನೆ ಜಾರಿಗೆ ತಂದಿದ್ದು, ಪ್ರತಿವರ್ಷ ಮೂರು ಕಂತುಗಳಲ್ಲಿ 6,000 ರೂ. ರೈತರ ಖಾತೆಗೆ ನೇರವಾಗಿ ಜಮೆ ಆಗಲಿದೆ. ಇದುವರೆಗೆ ರೈತರ ಖಾತೆಗಳಿಗೆ 1.6 ಲಕ್ಷ ಕೋಟಿ ರೂ. ಜಮೆ ಮಾಡಲಾಗಿದೆ.

ಯಾರೆಲ್ಲ ಫಲಾನುಭವಿಗಳು?: ಸಣ್ಣ ಮತ್ತು ಮಧ್ಯಮ ಪ್ರಮಾಣದ ರೈತರು ಈ ಯೋಜನೆಯ ಸದುಪಯೋಗ ಪಡೆಯಬಹುದು. ಎರಡು ಹೆಕ್ಟೇರ್‌ವರೆಗಿನ ಕೃಷಿ ಭೂಮಿ ಹೊಂದಿರುವ ಯಾವುದೇ ರೈತರು ಸಹ ಈ ಯೋಜನೆಯ ಫಲಾನುಭವಿಗಳಾಗಬಹುದು. ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ 11.17 ಕೋಟಿಗೂ ಹೆಚ್ಚು ರೈತರು ನೋದಾಯಿಸಿಕೊಂಡಿದ್ದಾರೆ. ಇವರೆಲ್ಲರಿಗೂ ಕೇಂದ್ರ ಸರಕಾರ ಸಹಾಯಧನ ನೀಡಿದೆ. ಆಯಾ ಹಣಕಾಸು ವರ್ಷದಲ್ಲಿ ಒಟ್ಟು ಮೂರು ಕಂತುಗಳಲ್ಲಿ ತಲಾ 2000 ರುಪಾಯಿಯಂತೆ ಒಟ್ಟು 6000 ರುಪಾಯಿ ನೀಡಲಾಗುತ್ತದೆ.

ನೋಂದಣಿ ಹೇಗೆ?

- ಪಿಎಂ ಕಿಸಾನ್‌ನ ಅಧಿಕೃತ ವೆಬ್‌ಸೈಟ್ ಪುಟಕ್ಕೆ ಹೋಗಿ
- ಅಲ್ಲಿ ಫಾರ್ಮರ್ ಕಾರ್ನರ್ ಮೇಲೆ ಕ್ಲಿಕ್ ಮಾಡಿ.
- ನಂತರ ನ್ಯೂ ಫಾರ್ಮರ್ ರಿಜಿಸ್ಟ್ರೇಶನ್ ಕ್ಲಿಕ್ಕಿಸಿ
- ನಿಮ್ಮ ಆಧಾರ್ ಸಂಖ್ಯೆಯನ್ನು ನಮೂದಿಸಿ
- ನಂತರ ಕ್ಯಾಪ್ಚ್ಚಾ ಕೋಡ್ ನಮೂದಿಸಿ
- ಮುಂದಿನ ಪುಟದಲ್ಲಿ ವಿವರಗಳನ್ನು ಭರ್ತಿಗೊಳಿಸಿ
- ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸಿ
- ಇವಿಷ್ಟರ ನಂತರ ಸಬ್ಮಿಟ್ ಮೇಲೆ ಕ್ಲಿಕ್ ಮಾಡಿ, ಸಲ್ಲಿಸಿ



ಅಗತ್ಯ ದಾಖಲೆಗಳು ಯಾವುವು

- ಆಧಾರ್ ಕಾರ್ಡ್ - ಅರ್ಜಿ ಸಲ್ಲಿಸುವ ರೈತರಿಗೆ ಇದು ಕಡ್ಡಾಯ
- ಆದಾಯ ದಾಖಲೆ ಹಾಗೂ ಕೃಷಿ ಭೂಮಿ ವಿವರಗಳು
- ಉಳಿತಾಯ ಖಾತೆ/ಜನ್-ಧನ್ ಖಾತೆ ಹೊಂದಿರುವ ಬ್ಯಾಂಕ್ ಪಾಸ್‌ಬುಕ್
- ರೈತರ ಮೊಬೈಲ್ ಸಂಖ್ಯೆ, ಬ್ಯಾಂಕ್ ಖಾತೆ ಮತ್ತು ಆಧಾರ್ ಕಾರ್ಡ್‌ಗೆ ಲಿಂಕ್ ಆಗಿರಲಿ
- ರೇಷನ್ ಕಾರ್ಡ್ ಮತ್ತು 2 ಪಾಸ್‌ಪೋರ್ಟ್‌ಅಳತೆಯ ಫೋಟೋಗಳು.

30-12-2021
Vsv Pg 13

For more information visit
University Library Website
Web - uasbagrilibindia.org
E-mail- librarian@uasbangalore.edu.in